# ಕನಕನ ಕಿಂಡಿ

ಕನಕನ ಕಿಂಡಿ ಪ್ರಸಿದ್ಧವಾಗಿದೆ. ಯಾವುದು ಪ್ರಸಿದ್ಧಿಗೆ ಬರುತ್ತದೆ ಅದರ ಸುತ್ತ ನಾನಾ ಕಾರಣಗಳಿಗಾಗಿ ವಿವಾದಗಳೇಳುತ್ತವೆ. ಏಳಲಿ; ಆದರೆ ವಾದಗಳು ಗೋಡೆಗಳಾಗದೆ ಇರಲಿ. ವಾದಗಳು ಸ್ವಯಂ ಕಿಂಡಿಗಳಂತಾಗಲಿ. ಅಂದರೆ ಅದರಾಚೆಗಿರುವುದು ಕಾಣಿಸುವಂತಾಗಲಿ. ಕೃಷ್ಣ; ಕನಕನತ್ತ ತಿರುಗಿದ ನಿಜ ನಮಗೆ ಅರ್ಥವಾಗಲಿ. ಕೃಷ್ಣನ ಮೂರ್ತಿಯೇ ತಿರುಗಿತೋ ಇಲ್ಲವೋ– ಅದು ಬೇರೆ ಮಾತು. ಒಂದು ಮಾತಂತೂ ನಿಜ. ಸ್ಥಾವರವಾದುದನ್ನು ಜಂಗಮವಾಗಿಸುವುದೇ, ಅಲ್ಲಾಡದೆ ಇರುವುದನ್ನು ಚಲನಶೀಲವಾಗಿಸುವುದೇ, ಎಲ್ಲೋ ಇದೆ; ನಮಗೆ ನಿಲುಕದು ಎಂದು ಇರುವುದನ್ನು ನಮ್ಮ ಅನುಭವಕ್ಕೆ ಅಭಿಮುಖವಾಗಿಸುವುದೇ ಎಲ್ಲ ವಾಙ್ಮಯಗಳ ಉದ್ದೇಶ; ಎಲ್ಲ ಕಥೆಗಳ ಉದ್ದೇಶ. ನಾವು ಆಳದಲ್ಲಿ ಸ್ವಾರ್ಥಿಗಳೂ ಜಾತಿ ವಾದಿಗಳೂ ಆಗಿರುವುದರಿಂದ ಇದಕ್ಕಿಂತ ಬೇರೆಯಾದ ಉದ್ದೇಶಗಳಿರುವುದನ್ನು ಅಲ್ಲಗಳೆಯಲು ಆಗುವುದಿಲ್ಲವಾದರೂ ಕನಕದಾಸರಂಥ ಅನುಭಾವಿಗಳ ಹಾಡುಗಳ ಮೂಲಕ ನೋಡಿದಾಗ ಎಲ್ಲ ಉದ್ದೇಶಗಳೂ ಬಯಲಾಗಬಹುದು. ಅವರ ಹಾಡುಗಳೇ ಅವರನ್ನು ನೋಡುವ ಕಿಂಡಿಗಳು. ಅವರ ಕೃಷ್ಣನನ್ನು ನೋಡಲಾಗುವ ಕಿಂಡಿಗಳು ಮತ್ತು ಎಷ್ಟೊಂದು ಕಿಂಡಿಗಳು!

ಪುರಾಣದ ಪ್ರತೀಕಗಳನ್ನು ತನ್ನ ಅನುಭವವಾಗಿ, ತನ್ನ ಪಾಡಾಗಿ ಕನಕರು ಹೇಗೆ ನೋಡುತ್ತಾರೆ. ಎನ್ನುವುದಕ್ಕೆ ಈ ಸಾಲುಗಳನ್ನು ಗಮನಿಸಬಹುದು.

‘ಹಲವು ಜನುಮದಿ ತಾಯಿ ಎನಗಿತ್ತ ಮೊಲೆವಾಲು
ನಲಿನಲಿದು ಉಂಟಾಗ ನೆಲಕೆ ಬಿದ್ದುದು ಕೂಡಿ
ಅಳೆದು ನೋಡಿದರೆ ಕ್ಷೀರಾಂಬುಧಿಗೆ ಎರಡು ಮಡಿ
ಅತ್ತ ಅಶ್ರುಜಲ ಅರ್ಣವಕೆ ಮೂರು ಮಡಿ
ಎಲುವುಗಳ ಕೂಡಿದರೆ ಮೇರುವಿಗೆ ನಾಲ್ಕು ಮಡಿ’

ಪುರಾಣಗಳ ಕಲ್ಪನೆ, ದೈವದ ಕಲ್ಪನೆ ಮೂಲತಃ ಮಾನವಾನುಭವದಲ್ಲಿದೆ ಎಂದು ಸೂಚಿಸುವ ಬಗೆ ಇದು! ಮೊಲೆವಾಲು ಕ್ಷೀರಸಾಗರವಾಗಿದೆ! ಕಣ್ಣೀರು ಲವಣ ಸಮುದ್ರವಾಗಿದೆ!

ಎಲುವುಗಳ ರಾಶಿ ಮೇರು ಪರ್ವತದಂತಿದೆ! ಈ ಸೃಷ್ಟಿಯಲ್ಲಿ ಮನುಷ್ಯ ಜೀವ ಪಟ್ಟಪಾಡು ಪುರಾಣವಾಗಿಬಿಟ್ಟಿದೆ! ಮತ್ತು ಈ ಎಲ್ಲ ಅನುಭವಗಳ ಮೂಲಕ ಹಾದು ಬಂದ ಮನುಷ್ಯ ಜೀವವೇ ದೇವರಂತೆ ಪುರಾಣ ಪುರುಷನಾಗಿದ್ದಾನೆ! ಇದು ಮನುಷ್ಯನ ವಿಶ್ವ– ರೂಪ. ಎಲ್ಲವನ್ನೂ ತನ್ನ ಅನುಭವಕ್ಕೆ ಅಭಿಮುಖಗೊಳಿಸುವ ಅಂತರಂಗದ ಜಂಗಮ ಕಿಂಡಿ. ಇದು ಕನಕನ ಕಿಂಡಿ!

ಕನಕರನ್ನು ನೆನದಾಗಲೆಲ್ಲ ಅವರ ಆ ಮಾರ್ಮಿಕವಾದ ಹಾಡು– ‘ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ’ ಎಂಬ ಹಾಡು ಮಿಂಚಿನಂತೆ ಕೋರೈಸುತ್ತ ನೆನಪಾಗುವುದು. ಈ ಹಾಡು, ಕಣ್ಣು, ನಾಲಗೆ, ಮೂಗುಗಳ ಇಂದ್ರಿಯಾನುಭವಗಳನ್ನು ಹೇಳುತ್ತದೆ. ಬಯಲು ಆಲಯದೊಳಗೋ? ಆಲಯವು ಬಯಲೊಳಗೋ? ಎಂದು ಕೇಳುತ್ತದೆ. ಬಯಲು– ಆಲಯವೆರಡು ನಯನದೊಳಗೋ? ಎಂದು ಅನುಭವವನ್ನು ತನ್ನದಾಗಿ ಆದಿಕೃತಗೊಳಿಸುತ್ತ– ಮರುಕ್ಷಣ ಎಚ್ಚತ್ತು– ನಯನ ಬುದ್ಧಿಯ ಒಳಗೊ? ಬುದ್ಧಿ ನಯನದ ಒಳಗೊ? ಎಂದು ಸಂದೇಹಿಸುತ್ತದೆ. ಈ ಸಂದೇಹವನ್ನು ಮತ್ತೂ ಮುಂದಕ್ಕೆ ಒಯ್ಯುತ್ತದೆ. ಅಂದರೆ ಕಿಂಡಿಗಳನ್ನು ತೆರೆಯುತ್ತ ತೆರೆಯುತ್ತ ಹೋಗುತ್ತದೆ. ಎಲ್ಲ ನಿನ್ನೊಳಗೊ ಹರಿಯೆ ಎನ್ನುತ್ತದೆ. ಹರಿಯೇ ಎನ್ನುವಲ್ಲಿ ಪ್ರಶ್ನಾರ್ಥಕ ಚಿಹ್ನೆಯೂ ಇದೆ; ಆಶ್ಚರ್ಯ ಚಿಹ್ನೆ ಕೂಡ ಇದೆ. ‘ಹರಿ’ ಎನ್ನುವುದು ಉತ್ತರವಲ್ಲದ ಉತ್ತರದಂತಿದೆ. ಅನುಭವದ ಸ್ಥಾವರ ಖಚಿತತೆ ಕರಗಿ ಅನುಭವದ ಜಂಗಮ ಸ್ಥಾನವಾಗಿ ‘ಹರಿ’ ಇದ್ದಾನೆ.

ಈ ಹಾಡು, ಇಂದ್ರಿಯಾನುಭವಗಳನ್ನು ಹೇಳುತ್ತದೆ– ನಿಜ. ಆದರೆ ಈ ಅನುಭವಗಳು ಮೈ– ಮರೆಯುವುದಕ್ಕಾಗಿ ಇಲ್ಲ, ಇವು ಇಷ್ಟೇ ಅಲ್ಲ, ಇವು ಏನೋ ರಹಸ್ಯಗಳನ್ನು ಒಳಗೊಂಡಿವೆ; ಆದುದರಿಂದ ಇವು ಶೋಧನೆಗಾಗಿ ಇವೆ; ನಮ್ಮ ಶೋಧನೆಗಾಗಿ ಕಾದಿವೆ– ಎನ್ನುತ್ತದೆ. ಒಳಗಿನವನಾಗಿಯೇ ಈ ಅನುಭವಗಳನ್ನು ಶೋಧಿಸು. ಅನುಭವದ ಒಳಗೆ ‘ಭವ’ ಇರಬಹುದು. ಇಲ್ಲಿ ಎಲ್ಲವೂ ಪರಸ್ಪರ ಬೆಸೆದುಕೊಂಡಂತೆ ಇರುವುದರಿಂದ ‘ಮಾಯೆ’ಯಿಂದ ದೂರ ಹೋಗಿ ‘ಸತ್ಯ’ವನ್ನು ತಿಳಿಯುವುದಾಗದು. ‘ಮಾಯೆ’ಗೆ ಒಳಗಾಗಲಾರೆನೆಂಬ ಅಹಂಕಾರವೇ ಮಾಯೆ. ಮಾಯೆಗೆ ಒಳಗಾಗುವ ವಿನಯಕ್ಕೆ ‘ಮಾಯೆ’ ಒಲಿಯಬಹುದು. ಕಡೆಯುವ ಕಡೆಗೋಲು ಮೊಸರೊಳಗಿದ್ದೇ ಮೊಸರನ್ನು ಕಡೆಯಬೇಕಲ್ಲವೆ? ಇತ್ಯಾದಿ ಅರ್ಥ ತರಂಗಗಳನ್ನೇ ಸೃಷ್ಟಿಸುವ ಹಾಡು ಇದು. ಅದಿರಲಿ.

‘ಬಯಲು ಆಲಯದೊಳಗೋ ಆಲಯವು ಬಯಲೊಳಗೋ’ ಎಂದು ಕನಕರು ಹಾಡುವಲ್ಲಿ ಶರಣರ ವಚನಗಳಲ್ಲಿ ಬಳಕೆಯಾದ ‘ಬಯಲು’ ಎನ್ನುವ ಪರಿಕಲ್ಪನೆಯನ್ನು ಖಂಡಿತ ನೆನಪಿಸುತ್ತಾರೆ. ಬಯಲು ಆಲಯಗಳನ್ನು ಗ್ರಹಿಸಬಲ್ಲ ನಯನ–ಬುದ್ಧಿಗಳು ನಿನ್ನೊಳಗೋ ಹರಿಯೇ– ಎನ್ನುವಲ್ಲಿ ‘ಬಯಲು’ ಮತ್ತು ‘ಹರಿ’ಯನ್ನು ಪರಸ್ಪರ ಒಳಗು ಮಾಡುತ್ತಾರೆ. ಶೈವ–ವೈಷ್ಣವರು ತಮ್ಮ ತಾಂತ್ರಿಕ ಜಗಳವನ್ನು ಮೀರಿ ಅನುಭವದ ನೆಲೆಯಲ್ಲಿ ಪರಸ್ಪರ ಒಳಗಾಗಬಲ್ಲರು ಎಂದೂ ಸೂಚಿಸುತ್ತಾರೆ.

ಕನಕ, ನಾಲಗೆಯ ರುಚಿಯ ಅನುಭವದ ನೆಲೆಯಿಂದ ಮಾತಾಡುತ್ತಾನೆ. ‘ಸವಿಯು ಸಕ್ಕರೆಯೊಳಗೋ? ಸಕ್ಕರೆಯು ಸವಿಯೊಳಗೋ? ಸವಿಯು ಸಕ್ಕರೆ ಎರಡು ಜಿಹ್ವೆಯೊಳಗೋ’ ಎನ್ನುತ್ತಾನೆ. ಇದು ಅನುಭವದ ಒಂದು ತುದಿ, ಮೊದಲ ಹಂತ, ಪ್ರಾರಂಭ, ಕನಕದಾಸನ ಒಡೆಯನಾದ ಭಗವಂತ ಕೃಷ್ಣನೂ ಇಂದ್ರಿಯಾನುಭವದೆ ನೆಲೆಯಿಂದಲೇ ಮಾತಾಡುತ್ತಾನೆ.

‘ನೀನು ಉಂಡ ಅನ್ನವನ್ನು ಪಚನ ಮಾಡುವವನು ನಾನು’– ಎಂದಿದ್ದ ಕೃಷ್ಣ– ಗೀತೆಯಲ್ಲಿ, ಅರ್ಜುನನೊಡನೆ. ಇದು ಅನುಭವದ ಇನ್ನೊಂದು ತುದಿ. ಇಬ್ಬರಿಗೂ ಪರಸ್ಪರ ಒಳಗೊಳ್ಳುವಿಕೆಯ ಮಾತುಗಳೇ. ಇಬ್ಬರ ಮಾತುಗಳೂ ಒಂದೇ. ಇಂದ್ರಿಯಾನುಭವ ಎಂಬ ಒಂದೇ ಕಿಂಡಿಯಲ್ಲಿ ಇಬ್ಬರೂ ಪರಸಪ್ರ ನೋಡುತ್ತಿದ್ದಾರೆ. ಇಬ್ಬರೂ ಪರಸ್ಪರ ಗುರುತಿಸುತ್ತಿದ್ದಾರೆ. ಇಬ್ಬರೂ ಪರಸ್ಪರರತ್ತ ತಿರುಗಿದ್ದಾರೆ. ಇದು ಕನಕನ ಕಿಂಡಿ!

■ **ತೋಷ**

## ಮಾತೇ ಮುತ್ತು

★ ಇನ್ನೊಬ್ಬನ ಚಾರಿತ್ರ್ಯದ ಬಗ್ಗೆ ಮಾತನಾಡುವಷ್ಟು ವಿವರವಾಗಿ ಮನುಷ್ಯ ತನ್ನ ಚಾರಿತ್ರ್ಯದ ಬಗ್ಗೆ ಮಾತನಾಡಲಾರ.

–ಜೀನ್ ಪಾಲ್ ರಿಚರ್

★ ಪರಿಸ್ಥಿತಿ ಮನುಷ್ಯನನ್ನು ರೂಪಿಸುವುದಿಲ್ಲ; ಆತನ ಚಾರಿತ್ರ್ಯ ಆತನನ್ನು ರೂಪಿಸುತ್ತದೆ.

–ಬ್ರೂಕರ್ ವಾಷಿಂಗ್ಟನ್

★ ಪ್ರತಿಯೊಬ್ಬನೂ ದುರ್ಬಲ ಜಾತಿಗಳ ಬಗ್ಗೆ ಸಹನೆ, ಪ್ರೀತಿಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುವುದು ಜಾತ್ಯತೀತ ನಡವಳಿಕೆಯ ಮೊದಲ ಘಟ್ಟ.

–ಪಿ.ಲಂಕೇಶ್

★ ನೋವು ಕೊಡುವ ತ್ಯಾಗ ಎಂದಿಗೂ ತ್ಯಾಗವೆನಿಸಿಕೊಳ್ಳುವುದಿಲ್ಲ. ನೈಜವಾದ ತ್ಯಾಗ ಸಂತೋಷವನ್ನು ಕೊಡುತ್ತದೆ. ಇತರರನ್ನು ಮೇಲೆತ್ತುತ್ತದೆ.

–ಮಹಾತ್ಮ ಗಾಂಧಿ

★ ಮೊಟ್ಟೆ ಇಡುವುದಕ್ಕಿಂತ ಮುಂಚೆ ಮರಿಗಳನ್ನು ಎಣಿಸಲು ಹೋಗಬೇಡ.

–ಈಸೋಪ

★ ನನಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಬೋಧಿಸುವ ಧರ್ಮ ಇಷ್ಟ.

–ಬಿ.ಆರ್. ಅಂಬೇಡ್ಕರ್

★ ಎದುರಿಗೆ ಕಾಣುವ ಮನುಷ್ಯರನ್ನೇ ಗೌರವಿಸದಿದ್ದರೆ, ಕಾಣದ ದೇವರನ್ನು ಹೇಗೆ ಪ್ರಾರ್ಥಿಸಲು ಸಾಧ್ಯ?

– ಮದರ್ ತೆರೆಸಾ

★ ಪ್ರತಿ ಕಾಯಿದೆ ಕೂಡ, ಅದನ್ನು ಮುರಿಯುವ ಬಗೆಯನ್ನು ಯೋಚಿಸಲು ಪ್ರೇರೇಪಿಸುತ್ತದೆ.

–ರಾಬರ್ಟ್ ಹೈನ್ಲೈನ್

★ ಬೇರೆಯವರ ಆಲೋಚನೆಗಳನ್ನು ಒಪ್ಪದಿದ್ದರೂ ಆತ್ಮೀಯತೆಯಿಂದ ಆಲಿಸುವುದು ಸುಶಿಕ್ಷಿತ ಮನಸ್ಸಿನ ಸಂಕೇತ.

–ಅರಿಸ್ಟಾಟಲ್